## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**Spl. CASE: 41/2023**

**ಪ್ರಾ.ಸಾ. 3**
**ದೋ.ಸಾ. 3**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಧರ್ |
| ತಂದೆಯ ಹೆಸರು | : | ಕೆ ಎನ್ ರಂಗಸ್ವಾಮಿ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕಂದವಾರ , ಚಿಕ್ಕಬಳ್ಳಾಪುರ.ತಾ. |

**ದಿನಾಂಕ 23-12-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ –2 ಮತ್ತು ಆರೋಪಿಯ ಪರಿಚಯವಿದೆ.

2. ನನ್ನ ಸಹಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ–4 ಮತ್ತು 5 ರ ದಾಖಲೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ–4 (ಸಿ) ಮತ್ತು 5 (ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು 2022 ನೇ ಸಾಲಿನಲ್ಲಿ ಒಂದು ದಿನ ನಾನು ನನ್ನ ಜಮೀನಿಗೆ ಹೋಗುವಾಗ ಪೋಲೀಸರು ಪಡೆದುಕೊಂಡಿದ್ದರು. ಆ ಸಂದರ್ಭದಲ್ಲಿ ಪೋಲೀಸರು ,ತಹಸೀಲ್ದಾರ್ ರವರು ಇದ್ದರು. ನನ್ನ ಸಮಕ್ಷಮ ಪಂಚನಾಮೆ ಜರುಗಿಸಿ ಯಾವುದೇ ಗಾಂಜಾ ಗಿಡಗಳನ್ನು ಜಪ್ತು ಪಡಿಸಿರುವುದಿಲ್ಲ. ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿರುವುದಿಲ್ಲ. ಸಾಕ್ಷಿ ನಿಪಿ–6 ರ ಪೋಟೋಗಳನ್ನು ನೋಡಿ ಅದರಲ್ಲಿ ತಾನು ಕಂಡುಬರುತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ–5 ರ ವಿವರಗಳು ನನಗೆ ತಿಳಿದಿರುವುದಿಲ್ಲ. ಈ ಕೇಸಿನ ಸಂಬಂದ ಪೋಲೀಸರು

ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ. ನನ್ನ ಜೊತೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ದಿನಾಂಕಃ 20-09-2022 ರಂದು ನನ್ನನ್ನು ಹಾಗೂ ಪ್ರಾಸಾ-2 ರವನ್ನು ಘಟನಾ ಸ್ಥಳದ ಬಳಿ ಬರ ಮಾಡಿಕೊಂಡು ಘಟನಾ ಸ್ಥಳದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದನ್ನು ಖಚಿತ ಪಡಿಸಿಕೊಂಡು ಪ್ರಾಸಾ-1 ರವರು, ಆರೋಪಿಯನ್ನು ಸ್ಥಳಕ್ಕೆ ಕರೆಸಿಕೊಂಡು ನನ್ನ ಹಾಗೂ ಮತ್ತೊಬ್ಬ ಪಂಚ ಸಾಕ್ಷಿಯಾದ ಪ್ರಾಸಾ-2 ರವರಿಗೆ ಸ್ಥಳದಲ್ಲಿ ನೋಟೀಸ್ ಜಾರಿ ಮಾಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ನಾವು ಒಪ್ಪಿದ್ದು, ಆ ನಂತರ ಚಾಸಾ-4 ತಹಸೀಲ್ದಾರ್ ಹಾಗೂ ನಮ್ಮೆಲ್ಲರಾ ಸಮಕ್ಷಮ ಆರೋಪಿಯವರ ಜಮೀನನಲ್ಲಿ ಬೆಳೆದಿದ್ದ 5 ಗಾಂಜಾ ಗಿಡಗಳನ್ನು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಂಡು ನಿಪಿ-5 ರಂತೆ ಪಂಚನಾಮೆಯನ್ನು ಸ್ಥಳದಲ್ಲಿ ಜರುಗಿಸಿ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ 5 ಗಿಡಳನ್ನು ಕಿತ್ತು ನೋಡಲಾಗಿ ಅವು 4 ರಿಂದ 4 1/2 ಅಡಿ ಉದ್ದ ಬೆಳೆದಿದ್ದು ಅದರ ಕಾಂಡವು ಸುಮಾರು 1/2 ಇಂಚು ದಪ್ಪ ಇದ್ದು, ಅವುಗಳಲ್ಲಿ 8-10 ರೆಂಬೆಗಳು ಇದ್ದು, ಅವುಗಳನ್ನು ತೂಕ ಮಾಡಲಾಗಿ 10 ಕೆಜೆ 136 ಗ್ರಾಂ ಇದ್ದು, ಅದರ ಮಾರಕಟ್ಟೆ ಬೆಲೆ 3 ಲಕ್ಷ ರೂ ಗಳಾಗಬಹುದು ಎಂದು

ಪಂಚನಾಮೆ ಬರೆಯಲಾಗಿದೆ ಎಂದರೆ ಸರಿಯಲ್ಲ. ಆ ನಂತರ ಸದರಿ ಗಿಡಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಹೊಲೆದು, ಪ್ಯಾಕ್ ಮಾಡಿ, ಸೀಲ್ ಮಾಡಿ ಮುಂದಿನ ಕ್ರಮಕ್ಕಾಗಿ ಮಾಲು ಹಾಗೂ ಆರೋಪಿಯನ್ನು ಪೋಲೀಸರು ವಶಕ್ಕೆಪಡೆದು ಕೊಂಡು, ಸಹಿಗಳುಳ್ಳ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ–6 ರ ಭಾವ ಚಿತ್ರಗಳನ್ನು ತೆಗೆದರು ಹಾಗೂ ನಾನು ಸಹ ಸದರಿ ಭಾವ ಚಿತ್ರದಲ್ಲಿ ಕಂಡು ಬರುತ್ತೇನೆ ಎಂದರೆ ಸರಿಯಲ್ಲ.

ಆ ನಂತರ ಠಾಣೆಯಲ್ಲಿ ವಿಚಾರ ಮಾಡಿದ್ದು ನಾನು ತನಿಖಾಧಿಕಾರಿಗಳ ಮುಂದೆ **" ಒಬ್ಬ ವ್ಯಕ್ತಿ ಗಾಂಜಾ ಗಿಡಗಳನ್ನು ಬೆಳೆದಿರುವುದಾಗಿ ಮಾಹಿತಿ ಬಂದಿದ್ದು , ಸದರಿ ಸ್ಥಳದಲ್ಲಿ ಪಂಚರಾಗಿ ಸಹಕರಿಸುವಂತೆ ನನ್ನನ್ನು ಕೋರಿದ್ದು ಅದರ ಮೇರೆಗೆ ನಾನು ಸ್ಥಳಕ್ಕೆ ಪೋಲೀಸ್ ಸಿಬ್ಬಂದಿ ಮತ್ತು ಪಂಚರಾದ ಪ್ರಾಸಾ–1 ರವರು ಘಟನಾ ಸ್ಥಳಕ್ಕೆ ಸರ್ಕಾರಿ ಜೀಪ್ ಸಂಖ್ಯೆ: ಕೆಎ–40 ಜಿ 63 ರಲ್ಲಿ ಕಂದವಾರ ಗ್ರಾಮಕ್ಕೆ ಹೋಗಿ, ಮಣ್ಣಿನ ರಸ್ತೆಯಲ್ಲಿ ಸ್ವಲ್ಪ ದೂರ ಹೋಗಿದ್ದು, ಆರೋಪಿಯ ಜಮೀನಿನಲ್ಲಿ ರೋಜಾ ಮತ್ತು ಕನಕಾಂಬರ ಹೂ ಗಿಡಗಳ ಮಧ್ಯೆ ಗಾಂಜಾ ಗಿಡಗಳು ಎತ್ತರವಾಗಿ ಬೆಳೆದಿರುವುದು ಕಂಡು ಬಂದಿದ್ದು, ತನಿಖಾಧಿಕಾರಿಗಳು ತಮ್ಮ ಇಬ್ಬರೂ ಪೋಲೀಸ್ ಸಿಬ್ಬಂದಿಗಳನ್ನು ಸದರಿ ಜಮೀನಿನ ಮಾಲೀಕರನ್ನು ಪತ್ತೇ ಮಾಡಿ ತಂದು ಹಾಜರುಪಡಿಸುವಂತೆ ನೇವಿಸಿದ್ದು, ಸದರಿರವರು ಸದರಿ ಜಮೀನಿನ ಮಾಲೀಕರಾದ ವೇಣುಗೋಪಾಲ್ ರವರನ್ನು ಅವರ ಮನೆಯ ಬಳಿ ವಶಕ್ಕೆ ಪಡೆದು ತಂದು ಹಾಜರುಪಡಿಸಿದ್ದು, ಸದರಿ ವ್ಯಕ್ತಿ ನಮ್ಮಗಳನ್ನು ನೋಡಿ ಗಾಭರಿ**

ಗೊಂಡು ನೀವೆಲ್ಲಾ ಯಾರು ಎಂದು ಕೇಳಿದ್ದು, ತನಿಖಾಧಿಕಾರಿಯು ಶರತ್ ಕುಮಾರ್ ಫ್ರಾಸಾ –1 ರವರು ತಮ್ಮ ಗುರುತಿನ ಚೀಟಿ ತೋರಿಸಿ ನಾವು ಸಿಇಎನ್  ಅಘರಾದ ಪೋಲೀಸರು ಎಂದು ತಮ್ಮ ಪರಿಚಯ ಮಾಡಿಕೊಟ್ಟಿದ್ದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಕೆಎ  ವೇಣು ಗೋಪಾಲ್ ಬಿನ್ ಸತ್ಯನಾರಾಯಣ, 39 ವರ್ಷ , ಬಲಜಿಗರು, ಕಂದವಾರ ಗ್ರಾಮ ಎಂದು ತಿಳಿಸಿದ್ದು,  ನಂತರ ಫ್ರಾಸಾ–1 ರವರು ಗಾಂಜಾ ಗಿಡಗಳನ್ನು ಬೆಳೆಯಲು ನಿಮ್ಮ ಬಳಿ ಪರವಾನಿಗೆ ಇದೆಯಾ? ಗಾಂಜಾಗಿಡಗಳನ್ನು ಏತಕ್ಕಾಗಿ ಬೆಳೆದಿರುತ್ತೀರಿ ಎಂದು ಕೇಳಲಾಗಿ  ಆತನು ತನ್ನ ಬಳಿ ಯಾವುದೇ ಅನುಮತಿ ಇಲ್ಲ  ಹಾಗೂ ಗಾಂಜಾ ಗಿಡಗಳನ್ನು ಮಾರಾಟ ಮಾಡಿ ಹಣ ಪಡೆಯುವ ಉದ್ದೇಶದಿಂದ ಬೆಳೆದಿರುವುದಾಗಿ ತಿಳಿಸಿದ್ದು ,  ನಂತ ಫ್ರಾಸಾ – 1 ರವರು ಸದರಿ ಗಂಜಾ ಗಿಡಗಳನ್ನು ಅಮಾನತ್ತು ಪಡಿಸಿ ಮುಂದಿನ ಕ್ರಮ ಜರುಗಿಸಿ ಕೊಡುವಂತೆ ತಹಸೀಲ್ದಾರ್ ರವರಿಗೆ ಕೋರಿದ್ದು , ಅದರಂತೆ  ಸದರಿ ಆಸಾಮಿಗೆ ಕೆಲವು ಪ್ರಶ್ನೆ ಗಳನ್ನು ಕೇಳಿ ನಂತರ  ಅವರು ಜಮೀನಿನಲ್ಲಿಗ ರೋಜ ಗಿಡಗಳು ಹಾಗೂ ಕನಕಾಂಬರ ಗಿಡಗಳ ಮದ್ಯೆ ಬೆಳೆದಿದ್ದ  ಗಾಂಜಾಗಿಡಗಳನ್ನು ಬೇರು ಸಮೇತ ಚನಿಕೆಯಿಂದ ಆತನ ಕೈಯಿಂದ ಕೀಳಿಸಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ  ಹಾಕಿ ದಾರದಿಂದ ಹೊಲೆದು ಅರಗಿನ ಸಹಾಯದಿಂದ " ಎನ್"  ಎಂಬ ಅಕ್ಷರದಿಂದ ಸೀಲು ಮಾಡಿ, ಅದರ ಮೇಲೆ ಪಂಚರಾದ ನಾವು ಮತ್ತು ತನಿಖಾಧಿಕಾರಿಗಳ ಸಹಿಗಳುಳ್ಳ ಚೀಟಿಯನ್ನು ಅಂಟಿಸಿ, ಫ್ರಾಸಾ–1 ರವರು ಅಮಾನತ್ತು ಪಡಿಸಿಕೊಂಡ  ಹಸಿ ಗಾಂಜಾ ಗಿಡಗಳು ಹಾಗೂ ಆರೋಪಿಯನ್ನು ಅವರ

**ವಶಕ್ಕೆ ಪಡೆದಿದ್ದು, ತಹಸಿಲ್ದಾರ್ ರವರು ಆರೋಪಿ ವಿರುದ್ದ ಸಿಇ ಎನ್ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಮಾಡಿರುತ್ತಾರೆ ಹಾಗೂ ಆರೋಪಿಯನ್ನು ಮತ್ತು ವಶಪಡಿಸಿಕೊಂಡ ಗಾಂಜಾ ಮಾಲನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು** ಈಗ ಓದಿ ಹೇಳಿ ಸೂಚಿಸಿದಂತೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗೆಳೆದ ತನ್ನ ಹೇಳಿಕೆಯ ಭಾಗವನ್ನು ನಿಪಿ–9 ಎಂದು ಗುರುತಿಸಲಾಯಿತು .ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಜಿ ರವರಿಂದ**

ಏನು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**